ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ14-10-2025 ರಂದು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜಿ ಎಚ್ ವಕೀಲರಿಂದಃ

5. ಈ ದಾವೆಯಲ್ಲಿ ಸಲ್ಲಿಸಿರುವ ಹಾತ ನಕಾಶೆಯಲ್ಲಿ A ರಿಂದ B ವರೆಗೆ ರಸ್ತೆ ಇರುತ್ತದೆ. ಪ್ರತಿವಾದಿಯ ವೈವಾಟಿಯಲ್ಲಿರುವ ಜಮೀನಿನಲ್ಲಿ ಅಡಿಕೆ ಗಿಡಗಳು ಇರುತ್ತವೆ ಎಂದರೆ ಸಾಕ್ಷಿ ಸುಮಾರು 5-6 ವರ್ಷದ ಅಡಿಕೆ ಗಿಡಗಳು ಇರುತ್ತವೆ ಎಂದು ಉತ್ತರಿಸುತ್ತಾರೆ.

6. ಈ ದಾವೆಯಲ್ಲಿ ಸಲ್ಲಿಸಿರುವ ಹಾತ ನಕಾಶೆಯಲ್ಲಿ A ರಿಂದ B ವರೆಗೆ ರಸ್ ಎಷ್ಟು ಅಗಲ ಇರುತ್ತದೆ ಎಂದು ತೋರಿಸಿರುವುದಿಲ್ಲ.

7. ನಮ್ಮ ಮನೆಗೆ ಹೋಗಲು ರಸ್ತೆ ಇದ್ದು ಸದರಿ ರಸ್ತೆಯನ್ನು ಪ್ರತಿವಾದಿಗಳು ಬಂದ್ ಮಾಡಿರುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಹಾತ ನಕಾಶೆಯ X point ನಲ್ಲಿ ಸದರಿ ರಸ್ತೆಯನ್ನು ಪ್ರತಿವಾದಿಗಳು ಬಂದ್ ಮಾಡಿರುತ್ತಾರೆ. ಆ ಬಗ್ಗೆ ನನ್ನ ಹಾತ ನಕಾಶೆಯಲ್ಲಿ ತೋರಿಸಿರುವುದಿಲ್ಲ. ಸದರಿ ರಸ್ತೆಯನ್ನು ಪ್ರತಿವಾದಿಗಳು ಬಂದ್ ಮಾಡಿರುವ ಬಗ್ಗೆ ನನ್ನ ದಾವೆಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ಸದರಿ ರಸ್ತೆಗೆ ಮಣ್ಣು ಹಾಕಿ ಮುಚ್ಚಿ ರಸ್ತೆಗೆ ಹೊಂದಿಕೊಂಡಂತೆ ಪ್ರತಿವಾದಿಗಳು ಮೂರು ಮನೆಗಳನ್ನು ಕಟ್ಟಿರುತ್ತಾರೆ. ಸದರಿ ಬಂದ್ ಆಗಿರುವ ರಸ್ತೆಯ್ನು ತೆರವು ಗೊಳಿಸುವಂತೆ ನಾನು ಈ ನ್ಯಾಯಾಲಯದಲ್ಲಿ ಪರಿಹಾರ ಕೇಳಿಲ್ಲ.

8. ನಾನು ಪ್ರತಿವಾದಿಯರ ವಿರುದ್ಧ ಈದೇ ನ್ಯಾಯಾಲಯದಲ್ಲಿ OS No 15/2019 ರಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ.

9. ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಈ ದಾವೆ ಯನ್ನು ಮತ್ತು OS No 15/2019 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ನನ್ನ ದಾವೆಯಲ್ಲಿ ಹೇಳಿದಂತೆ ಯಾವುದೇ ರಸ್ತೆ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**